ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

1. ಸದರಿ ಗ್ರಾಮಗಳು ಅಥಣಿ ತಾಲ್ಲೂಕಿನ ಮದನಬಾವಿ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಜಂಬಗಿ, ಸಂಬರಗಿ ಹಳ್ಳಿಗಳಲ್ಲಿ ಉಪಕೇಂದ್ರಗಳಿದ್ದು, ಜಂಬಗಿ ಉಪಕೇಂದ್ರದಲ್ಲಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಹುದ್ದೆ ಖಾಲಿ ಇರುತ್ತದೆ. ಉಪಕೇಂದ್ರಗಳಿಗೆ ವೈದ್ಯರು ಭೇಟಿ ನೀಡಿ 'ಕ್ಲಿನಿಕ್' ಗಳನ್ನು ನಡೆಸುವುದರ ಮೂಲಕ, ಆರೋಗ್ಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.

2. ಅಥಣಿ ತಾಲ್ಲೂಕಿನ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಮಂಜೂರಾತಿಯಾದ ವೈದ್ಯಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳ ಸಂಖ್ಯೆ ಹಾಗೂ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಈ ಕೆಳಕಂಡಂತಿದೆ.

	ಮಂ.	ಕಾ.	ಖಾ.
ವೈದ್ಯಾಧಿಕಾರಿಗಳು	27	22	5
ಇತರೆ ಸಿಬ್ಬಂದಿಗಳು	287	153	134

3. ಶಾಲೆ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು, ಅದು ಅಂತಿಮಗೊಂಡ ನಂತರ ಭರ್ತಿ ಮಾಡಲಾಗುವುದು.

ಜಿಲ್ಲಾಧಿಕಾರಿಗಳಿಗೆ ಪ್ರಸ್ತುತ ಖಾಲಿ ಇರುವ ತಜ್ಞರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಗೌರವಧನದ ಆಧಾರದ ಮೇಲೆ ತಜ್ಞ ವೈದ್ಯರನ್ನು ಮತ್ತು ನಿವೃತ್ತ ಸರ್ಕಾರಿ ತಜ್ಞರುಗಳನ್ನು ನೇಮಕ ಮಾಡುವುದು ಹಾಗೂ ಖಾಸಗಿ ವೈದ್ಯರನ್ನು ಸಮಾಲೋಚಕರನ್ನಾಗಿ ಒಂದು ಭೇಟಿಗೆ 800 ರೂ.ಗಳ ಆಧಾರದ ಮೇಲೆ ನೇಮಕ ಮಾಡುವ ಅಧಿಕಾರವನ್ನು ನೀಡಲಾಗಿದೆ.

ಖಾಲಿ ಇರುವ ಇತರ ವೈದ್ಯಕೀಯೇತರ ಹುದ್ದೆಗಳನ್ನು ವಿಶೇಷ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆ

461 (776) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ): ಮಾನ್ಯ ಗ್ರಾಮೀಣಾ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ನೀರಿನ ಯೋಜನೆಗಳಿಗಾಗಿ ಗ್ರಾಮೀಣ ಪ್ರದೇಶದಲ್ಲಿ ಎಷ್ಟು ಅನುದಾನ ಮಂಜೂರಾಗಿರುತ್ತದೆ; ಇವುಗಳಲ್ಲಿ ಅಥಣಿ ತಾಲ್ಲೂಕಿಗೆ ಎಷ್ಟು ಮಂಜೂರಾಗಿರುತ್ತದೆ;

2. ಇವುಗಳಲ್ಲಿ ಎಷ್ಟು ಯೋಜನೆಗಳನ್ನು ಕಾರ್ಯಗತ ಮಾಡಲಾಗುತ್ತಿದೆ; ಇವುಗಳಿಗಾಗಿ ಎಷ್ಟು ಅನುದಾನವನ್ನು ಖರ್ಚು ಮಾಡಲಾಗಿದೆ;

3. ಈಗ ಸದ್ಯದ ಪರಿಸ್ಥಿತಿಯಲ್ಲಿ ವಿಫಲವಾಗಿರುವ ಯೋಜನೆಗಳು ಎಷ್ಟು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು):

1. ಕಳೆದ 3 ವರ್ಷಗಳಲ್ಲಿ ರಾಜ್ಯ ಮತ್ತು ಕೇಂದ್ರ ವಲಯದಡಿ ಒಟ್ಟು ರೂ.73288.61 ಲಕ್ಷಗಳನ್ನು ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳಿಗಾಗಿ ಬಿಡುಗಡೆ ಮಾಡಲಾಗಿದೆ, ಇದರಲ್ಲಿ ಅಥಣಿ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಗಳಿಗಾಗಿ ಒಟ್ಟು ರೂ.414.55 ಲಕ್ಷಗಳನ್ನು ಒದಗಿಸಲಾಗಿದೆ.

2. ಒಟ್ಟಾರೆ ರೂ.309.32 ಲಕ್ಷಗಳನ್ನು ವೆಚ್ಚ ಮಾಡಿ 29 ಕೊಳವೆ ನೀರು ಸರಬರಾಜು ಯೋಜನೆಗಳು, 28 ಕಿರು ನೀರು ಸರಬರಾಜು ಯೋಜನೆಗಳು ಮತ್ತು 130 ಕೈಪಂಪು ಕೊಳವೆ ಬಾವಿಗಳನ್ನು ಕಾರ್ಯಗತ ಗೊಳಿಸಲಾಗಿದೆ.

3. ಜಲಮೂಲಗಳಲ್ಲಿ ಇಳುವರಿ ಕಡಿಮೆಯಾಗಿ, 9 ಕೊಳವೆ ನೀರು ಸರಬರಾಜು ಮತ್ತು 3 ಕಿರು ನೀರು ಸರಬರಾಜು ಯೋಜನೆಗಳು ವಿಫಲವಾಗಿವೆ.

ಅಥವಾ ಪುರ ಸಭೆಯ ವ್ಯಾಪ್ತಿಯಲ್ಲಿ ಕೊಳಚೆ ಪ್ರದೇಶಗಳ ಅಭಿವೃದ್ಧಿ

462 (777) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಅಥಣಿ ಪುರಸಭೆಯ ವ್ಯಾಪ್ತಿಯಲ್ಲಿ ಅಂಬೇಡ್ಕರ್ ನಗರ ಲಿಡ್ಕರ್ ಕಾಲೋನಿ ಗೊಲ್ಲರ ಓಣಿ ಚರ್ಮಾಲಯ ರಸ್ತೆ ಗವಿಸಿದ್ದನ ಮಡ್ಡಿ ಮುಂತಾದ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಕೊಳಚೆ ನಿರ್ಮೂಲನ ಮಂಡಳಿಯಿಂದ ಕ್ರಮ ಜರುಗಿಸಲಾಗಿದೆಯೇ;

2. ಇನ್ನು ಮುಂದೆ ಈ ಪ್ರದೇಶಗಳಲ್ಲಿ ಅಭಿವೃದ್ಧಿಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಸಿ.ಆರ್.ಸಗೀರ್ ಅಹಮದ್ (ವಸತಿ ಸಚಿವರು):

1. ಹೌದು.

2. ಅಥಣಿ ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳಾದ 1.ಚರ್ಮಾಲಯ ರಸ್ತೆ 2. ವಡ್ಡರಗಲ್ಲಿ 3. ಡೋರಗಲ್ಲಿ 4. ಹರಿಜನಕೇರಿ ಕೊಳಚೆ ಪ್ರದೇಶಗಳಿಗೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ನೆಲಹಾಸು, ಚರಂಡಿ, ಕುಡಿಯುವ ನೀರು, ಖಡಿ ರಸ್ತೆ, ಬೀದಿ ದೀಪಗಳು ಹಾಗೂ ಕಲ್ಲಿನ ನೆಲಹಾಸು ಕಾಮಗಾರಿಗಳನ್ನು ಕೈಗೊಂಡಿದ್ದು, ಅಭಿವೃದ್ಧಿ ಮಾಡಲಾಗಿದೆ. ಈ ಕಾಮಗಾರಿಗಳಿಗಾಗಿ ಒಟ್ಟು 8.50 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

2002-03 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅಥಣಿ ಪಟ್ಟಣದ ಹರಿಜನಕೇರಿ ಕೊಳಚೆ ಪ್ರದೇಶಕ್ಕೆ ರೂ.2.00 ಲಕ್ಷಗಳ ಅನುದಾನವನ್ನು ನೀಡಿದ್ದು ಈ ಮೊತ್ತವನ್ನು ಬಾಕಿ ಇರುವ ನೆಲಹಾಸು ಮತ್ತು ಚರಂಡಿಯ ಕಾಮಗಾರಿಯನ್ನು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ಮುಖಾಂತರ ಕೈಗೊಳ್ಳಲಾಗುತ್ತಿದೆ.